ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 5, November-December 2023, Pp. 15-21
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಉನ್ನತ ಶಿಕ್ಷಣದಲ್ಲಿ ಗ್ರಾಮೀಣ ವಿದ್ಯಾರ್ಥಿನಿಯರ ಸಮಸ್ಯೆಗಳು : ಒಂದು ಸಮಾಜಶಾಸ್ತ್ರೀಯ ಅಧ್ಯಯನ

ರಾಜು ಎಸ್[1]. ಮತ್ತು ಡಾ. ಚಂದ್ರಶೇಖರ್ ಈ[2].

[1]ಸಂಶೋಧನಾ ವಿದ್ಯಾರ್ಥಿ & [2]ಪ್ರಾಧ್ಯಾಪಕರು

ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ, ಶಿವಮೊಗ್ಗ ಜಿಲ್ಲೆ.

***Abstract:***

*ಭಾರತವು ಹಳ್ಳಿಗಳಿಂದ ಕೂಡಿದ ದೇಶ. ಗ್ರಾಮಗಳು ಭಾರತೀಯ ಸಮಾಜದ ಮುಖ್ಯವಾದ ಸಾಮಾಜಿಕ ಮತ್ತು ಆರ್ಥಿಕ ಘಟಕಗಳಾಗಿವೆ. ಇಂದಿಗೂ ಭಾರತದ ಶೇಕಡ 65ರಷ್ಟು ಜನರು ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಭಾರತವು ಅನನ್ಯ ಸಂಸ್ಕೃತಿ ಮತ್ತು ಬಹುತ್ವತೆಗೆ ಹೆಸರುವಾಸಿಯಾಗಿರವ ರಾಷ್ಟ್ರವಾಗಿದೆ. ಪ್ರಾಚೀನ ಭಾರತದಲ್ಲಿ ಮಹಿಳೆಯರಿಗೆ ಉನ್ನತವಾದ ಸ್ಥಾನವಿತ್ತು. ಆದರೆ ಕಾಲಾಂತರದಲ್ಲಿ ಮಹಿಳೆಯರನ್ನು ದ್ವಿತೀಯ ದರ್ಜೆಯ ಪ್ರಜೆಯನ್ನಾಗಿಸಿ ವಂಚಿಸಲಾಗಿದೆ. ಇದನ್ನರಿತ ಸಂವಿಧಾನ ರಚನಾಕಾರರು ಸಂವಿಧಾನದಲ್ಲಿ ಮಹಿಳೆಯರಿಗೆ ಸಮಾನ ಅವಕಾಶಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಇದರ ಪರಿಣಾಮ ಸ್ವಾತಂತ್ರ್ಯ ನಂತರ ಮಹಿಳೆಯರೂ ಕೂಡ ಶಿಕ್ಷಣ ಪಡೆಯುವಲ್ಲಿ ಆಸಕ್ತಿ ತೋರುತ್ತಿದ್ದಾರೆ. ಶಿಕ್ಷಣವು ಮಹಿಳಾ ಸಬಲೀಕರಣಕ್ಕೆ ಮೂಲಭೂತ ಅಗತ್ಯವಾಗಿದೆ. ಆದರೆ ಇಂದಿಗೂ ಗ್ರಾಮೀಣ ಪ್ರದೇಶದ ಮಹಿಳೆಯರು ಉನ್ನತ ಶಿಕ್ಷಣವನ್ನು ಪಡೆದುಕೊಳ್ಳುವಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿನಿಯರು ಎದುರಿಸುತ್ತಿರುವ ಸಮಸ್ಯೆಗಳೇನು? ಅದರಿಂದಾಗುತ್ತಿರುವ ಪರಿಣಾಮಗಳೇನು? ಮುಂತಾದವುಗಳನ್ನು ಸಮಾಜಶಾಸ್ತ್ರೀಯ ಚೌಕಟ್ಟಿನೊಳಗೆ ಈ ಲೇಖನದಲ್ಲಿ ಚರ್ಚಿಸಿ ವಿಶ್ಲೇಷಿಸಲಾಗಿದೆ.*

***Keywords:*** *ಗ್ರಾಮೀಣ ಪ್ರದೇಶ, ಮಹಿಳೆಯರು, ವಿದ್ಯಾರ್ಥಿನಿಯರು, ಉನ್ನತ ಶಿಕ್ಷಣ, ಸಾಕ್ಷರತೆ, ಲಿಂಗಸಮಾನತೆ.*

## ಪೀಠಿಕೆ

ಮಹಿಳೆಯರಿಗೆ ಶಿಕ್ಷಣವು ಅಗತ್ಯವಾಗಿದೆ. ಏಕೆಂದರೆ ಭಾರತೀಯ ಸಮಾಜದಲ್ಲಿ ಮಹಿಳೆಯರು ನಿರಂತರವಾಗಿ ತಾರತಮ್ಯ, ಅನ್ಯಾಯ, ವಂಚನೆ, ಬಡತನ, ಹಿಂಸೆ ಮತ್ತು ನಿಂಧನೆ ವಿರುದ್ಧ ಹೋರಾಡಬೇಕಾಗುತ್ತದೆ. ಮಹಿಳೆಯರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಸಂವಿಧಾನಾತ್ಮಕ ನಿಬಂಧನೆಗಳು ಮತ್ತು ಕಾನೂನುಗಳನ್ನು ಮಾಡಲಾಗಿದೆ. ಆದರೆ ಪುರುಷ ಮತ್ತು ಮಹಿಳೆಯರ ನಡುವಿನ ಅಸಮಾನತೆಯು ಇಂದಿಗೂ ಕಡಿಮೆಯಾಗಿಲ್ಲದಿರುವುದು ತಿಳಿದುಬರುತ್ತದೆ. ಮಹಿಳೆಯರ ಈ ಸ್ಥಿತಿಗೆ ಸಂಪ್ರದಾಯ ಮತ್ತು ಇತರೆ ಸಾಮಾಜಿಕ ನಿರ್ಬಂಧಗಳಿಂದ ಬಲಪಡಿಸಲಾದ ಪಿತೃಪ್ರಭುತ್ವದ ಮೌಲ್ಯಗಳು ಪ್ರಮುಖ ಪಾತ್ರ

***Please cite this article as:*** ರಾಜು ಎಸ್ ಮತ್ತು ಚಂದ್ರಶೇಖರ್ ಈ. (2023). ಉನ್ನತ ಶಿಕ್ಷಣದಲ್ಲಿ ಗ್ರಾಮೀಣ ವಿದ್ಯಾರ್ಥಿನಿಯರು ಎದುರಿಸುತ್ತಿರುವ ಸಮಸ್ಯೆಗಳು: ಒಂದು ಸಮಾಜಶಾಸ್ತ್ರೀಯ ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 2(5), 15–21.

ವಹಿಸುತ್ತವೆ. ಮಹಿಳೆಯರು ಭಾರತೀಯ ಸಮಾಜದಲ್ಲಿ ಅವಕಾಶ ವಂಚಿತ ಮತ್ತು ಲಿಂಗ ತಾರತಮ್ಯಕ್ಕೆ ಒಳಗಾದ ಗುಂಪಾದ್ದರಿಂದ ಇವರು ಹಿಂದುಳಿದ ಗುಂಪಾಗಿದ್ದಾರೆ. ಈ ರೀತಿಯ ಹಿಂದುಳಿದ ಗುಂಪಾಗಿರುವುದರಿಂದಲೇ ಸಮಾಜದ ಅಂಚಿಗೆ ತಳ್ಳಲ್ಪಟ್ಟಿದ್ದಾರೆ.

ಸಂವಿಧಾನ ಸರ್ವರಿಗೂ ಸಮಾನತೆಯನ್ನು ನೀಡಿ, ಲಿಂಗ ಭೇದವನ್ನು ನಿಷೇಧಿಸಿತಾದರೂ ವಾಸ್ತವ್ಯದಲ್ಲಿ ಮಹಿಳೆಯರ ಶಿಕ್ಷಣ ನಿರೀಕ್ಷಿಸಿದ ಪ್ರಗತಿಯನ್ನು ಸಾಧಿಸಿಲ್ಲ. 2011ರಲ್ಲಿ ಮಹಿಳಾ ಸಾಕ್ಷರತೆಯ ಪ್ರಮಾಣ ಶೇಕಡ 65.46 ರಷ್ಟಿದೆ. ಶಿಕ್ಷಣದ ಎಲ್ಲಾ ಮಟ್ಟಗಳಲ್ಲಿಯೂ ವಿದ್ಯಾರ್ಥಿನಿಯರ ದಾಖಲಾತಿಯ ಪ್ರಮಾಣದಲ್ಲಿ ಹೆಚ್ಚಳ ಉಂಟಾಗಿದೆಯಾದರೂ ದೇಶದ ಅನೇಕ ಭಾಗಗಳಲ್ಲಿ ಮಹಿಳಾ ಸಾಕ್ಷರತೆಯ ಪ್ರಮಾಣ ಕೆಳಮಟ್ಟದಲ್ಲಿದೆ. ಪ್ರದೇಶವಾರು ಮಹಿಳಾ ಸಾಕ್ಷರತೆಯ ಪ್ರಮಾಣವನ್ನು ಗಮನಿಸಿದಾಗ ಸ್ತ್ರೀ ಸಾಕ್ಷರತೆಯ ಪ್ರಮಾಣ ನಗರ ಪ್ರದೇಶದಲ್ಲಿ ಶೇಕಡ 65.66 ರಷ್ಟಿದ್ದರೆ, ಗ್ರಾಮೀಣ ಪ್ರದೇಶಗಳಲ್ಲಿ ಈ ಪ್ರಮಾಣ ಶೇಕಡ 30.58 ರಷ್ಟು ಮಾತ್ರವಿದೆ. ಬಡತನ, ಅಜ್ಞಾನ, ಮೌಢ್ಯ, ಹಾಗೂ ಸ್ತ್ರೀ ಶಿಕ್ಷಣವನ್ನು ಕುರಿತಂತಹ ಸಾಮಾಜಿಕ ಧೋರಣೆ ಮಹಿಳಾ ಶಿಕ್ಷಣಾವಕಾಶಗಳ ಸಮಾನ ಬಳಕೆಗೆ ಈ ನಾಲ್ಕು ಅಂಶಗಳೂ ಒಟ್ಟಾಗಿ ಕಲೆತು, ಅವರ ಶೈಕ್ಷಣಿಕ ಪ್ರಗತಿಗೆ ಬಲವಾದ ಗದಾಪ್ರಹಾರವನ್ನು ನೀಡುತ್ತವೆ ಎಂಬುದಾಗಿ ಸಮಾಜಶಾಸ್ತ್ರಜ್ಞೆ ಆರ್.ಇಂದಿರಾ (2002) ಅಭಿಪ್ರಾಯಪಡುತ್ತಾರೆ. ಈ ಹಿನ್ನೆಲೆಯಲ್ಲಿ ಮಹಿಳೆಯರ ಉನ್ನತ ಶಿಕ್ಷಣದ ಪಾಲ್ಗೊಳ್ಳುವಿಕೆಗೆ ಇರುವಂತಹ ಅಡೆತಡೆಗಳನ್ನು ಗುರುತಿಸುವುದು ಹಾಗೂ ಉನ್ನತ ಶಿಕ್ಷಣ ಪಡೆಯುವಲ್ಲಿ ಗ್ರಾಮೀಣ ಯುವತಿಯರು ಎದುರಿಸುತ್ತಿರುವ ಸಮಸ್ಯೆಗಳ ವಿವಿಧ ಮಜಲುಗಳನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ಅಧ್ಯಯನ ಮಾಡುವುದು ಸೂಕ್ತವಾದುದ್ದಾಗಿದೆ.

ರಾಷ್ಟ್ರದ ಭವ್ಯ ನಿರ್ಮಾಣದಲ್ಲಿ ಮಹತ್ವವಾದ ಪಾತ್ರವನ್ನು ನಿರ್ವಹಿಸುವ ಯುವಜನಾಂಗ, ವಿಶೇಷವಾಗಿ ಗ್ರಾಮೀಣ ಮಹಿಳೆಯರು ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಭಾರತದಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವ ಗ್ರಾಮೀಣ ವಿದ್ಯಾರ್ಥಿನಿಯರ ಪ್ರಮಾಣ ಅತ್ಯಲ್ಪವಾಗಿದೆ. ಭಾರತ ಸ್ವಾತಂತ್ರ್ಯಗೊಂಡು 76 ವರ್ಷಗಳು ಗತಿಸಿದರೂ ಮಹಿಳಾ ಶಿಕ್ಷಣ ಅಷ್ಟೇನೂ ಪ್ರಗತಿ ಸಾಧಿಸಿಲ್ಲ. ಅಧ್ಯಯನ ಸಮಯದಲ್ಲಿ ಗ್ರಾಮೀಣ ಪೋಷಕರ ಅಭಿಪ್ರಾಯದಂತೆ ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಪೋಷಕರು ನಿರ್ಲಕ್ಷ್ಯ ತೋರಿಸುವುದಕ್ಕೆ ಸಂಪ್ರದಾಯ, ಬಡತನ, ಅನಕ್ಷರತೆ, ಮೂಢನಂಬಿಕೆ, ವಿವಾಹ, ಶಾಲೆಗಳ ದೂರ, ತಾರುಣ್ಯದ ಸಮಸ್ಯೆ, ಪ್ರೌಢ ವಯಸ್ಸು, ತಂದೆ–ತಾಯಿ ಇಲ್ಲದಿರುವುದು, ಚಿಕ್ಕ ಮಕ್ಕಳನ್ನು ನೋಡಿಕೊಳ್ಳುವುದು, ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಸೂಕ್ತ ಶೈಕ್ಷಣಿಕ ಸವಲತ್ತುಗಳನ್ನು ನೀಡದಿರುವುದು, ಮಾರ್ಗದರ್ಶನದ ಕೊರತೆ ಪ್ರಮುಖ ಕಾರಣಗಳಾಗಿವೆ.

**ಅಧ್ಯಯನದ ಪ್ರಾಮುಖ್ಯತೆ**

ಪ್ರತಿಯೊಂದು ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಯು ಆ ರಾಷ್ಟ್ರದ ಶಿಕ್ಷಣದ ಗುಣಮಟ್ಟ, ಶಿಕ್ಷಿತರ ಪ್ರಮಾಣ, ಶಿಕ್ಷಣ ವ್ಯವಸ್ಥೆ, ಮಾನವ ಅಭಿವೃದ್ಧಿಯ ಸೂಚ್ಯಾಂಕ ಮುಂತಾದ ವಿಷಯಗಳ ಮೇಲೆ ಅವಲಂಬಿತವಗಿರುತ್ತದೆ. ಈ ನಿಟ್ಟಿನಲ್ಲಿ ಗ್ರಾಮೀಣ ಮಹಿಳೆಯರು ಉನ್ನತ ಶಿಕ್ಷಣ ಪಡೆಯುವಲ್ಲಿ ಇರುವ ಅಡೆತಡೆಗಳನ್ನು ಪರಿಹರಿಸಿ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸುವಂತದ್ದು, ಭಾರತದಂತಹ ಗ್ರಾಮಗಳ ದೇಶಕ್ಕೆ ಅವಶ್ಯಕವಾದದ್ದು. ಈ ಹಿನ್ನೆಲೆಯಲ್ಲಿ ಗ್ರಾಮೀಣ ಮಹಿಳೆಯರು ಉನ್ನತ ಶಿಕ್ಷಣದಲ್ಲಿ ಭಾಗವಹಿಸದಂತೆ ತಡೆಯೊಡ್ಡುತ್ತಿರುವ ಅಂಶಗಳು ಯಾವುವು? ಉನ್ನತ ಶಿಕ್ಷಣ ಪಡೆಯುವಲ್ಲಿ ಪುರುಷರಿಗಿಂತ ಮಹಿಳೆಯರ ದಾಖಲಾತಿ ಪ್ರಮಾಣ ಕಡಿಮೆಯಾಗಲು ಯಾವ ಅಂಶಗಳು ಕಾರಣವಾಗುತ್ತವೆ? ಆ ಕಾರಣಗಳು

ಸಾಮಾಜಿಕ ವಾದವೇ? ಆರ್ಥಿಕ ಸ್ವರೂಪದವೇ? ಅಥವಾ ಶೈಕ್ಷಣಿಕ ವಾದವೇ? ಮಹಿಳೆಯರ ಉನ್ನತ ಶಿಕ್ಷಣದ ಬಗ್ಗೆ ಗ್ರಾಮೀಣ ಪೋಷಕರ ಮನೋಪ್ರವೃತ್ತಿ ಹೇಗಿದೆ? ಹೀಗೆ ಕೆಲವು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದರ ಮೂಲಕ ಗ್ರಾಮೀಣ ಯುವತಿಯರ ಉನ್ನತ ಶಿಕ್ಷಣದಲ್ಲಿನ ಸಮಸ್ಯೆಗಳ ಒಟ್ಟು ಚಿತ್ರಣವನ್ನು ಅರ್ಥಮಾಡಿಕೊಳ್ಳುವುದು ಪ್ರಸ್ತುತ ಅಧ್ಯಯನದ ಮೂಲ ಆಶಯವಾಗಿದೆ. ಅಲ್ಲದೇ, ಗ್ರಾಮೀಣ ಮಹಿಳೆಯರ ಉನ್ನತ ಶಿಕ್ಷಣದ ಸಮಗ್ರ ಬೆಳವಣಿಗೆಗೆ ಸರ್ಕಾರ, ಸಾರ್ವಜನಿಕ ಸೇವಾ ಸಂಸ್ಥೆಗಳು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಪ್ರಸ್ತುತ ಅಧ್ಯಯನ ಉಪಯುಕ್ತವಾಗುವುದರಿಂದ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ.

**ಅಧ್ಯಯನದ ಉದ್ದೇಶಗಳು**

- ಉನ್ನತ ಶಿಕ್ಷಣ ಪಡೆಯುತ್ತಿರುವ ಗ್ರಾಮೀಣ ವಿದ್ಯಾರ್ಥಿನಿಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವುದು.
- ಉನ್ನತ ಶಿಕ್ಷಣ ಪಡೆಯುವಲ್ಲಿ ಗ್ರಾಮೀಣ ಯುವತಿಯರು ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳನ್ನು ವಿಶ್ಲೇಷಿಸುವುದು.

**ಅಧ್ಯಯನದ ಮಾದರಿ**

ಪ್ರಸ್ತುತ ಸಂಶೋಧನೆಗೆ ದಾವಣಗೆರೆ ಜಿಲ್ಲೆಯ ವ್ಯಾಪ್ತಿಗೆ ಬರುವ ಪದವಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಗ್ರಾಮೀಣ ಯುವತಿಯರನ್ನು ಅಧ್ಯಯನಕ್ಕೆ ಒಳಪಡಿಸಲಾಗಿದ್ದು, ಅಧ್ಯಯನಕ್ಕಾಗಿ ಸರಳ ಯಾದೃಚ್ಛಿಕ ಮಾದರಿ ವಿಧಾನವನ್ನು ಅಳವಡಿಸಿಕೊಂಡು ಒಟ್ಟು 150 ಗ್ರಾಮೀಣ ವಿದ್ಯಾರ್ಥಿಯರನ್ನು ಆಯ್ಕೆ ಮಾಡಿ, ಕ್ಷೇತ್ರಕಾರ್ಯ ಕೈಗೊಂಡು ವಿದ್ಯಾರ್ಥಿನಿಯರನ್ನು ನೇರವಾಗಿ ಸಂದರ್ಶಿಸಿ ಪ್ರಾಥಮಿಕ ಮಾಹಿತಿ ಸಂಗ್ರಹಿಸಲಾಗಿದೆ. ಹಾಗೆಯೇ, ಇದುವರೆಗೆ ಮಹಿಳಾ ಶಿಕ್ಷಣದ ಕುರಿತು ಪ್ರಕಟಗೊಂಡಿರುವ ಸಾಹಿತ್ಯ, ಕೃತಿ ಹಾಗೂ ವಿವಿಧ ದಿನ ಪತ್ರಿಕೆ, ನಿಯತಕಾಲಿಕೆಗಳಲ್ಲಿನ ಲೇಖನಗಳನ್ನು ಸಂಗ್ರಹಿಸಿ ಸಂಶೋಧನೆಯಲ್ಲಿ ಬಳಸಿಕೊಳ್ಳಲಾಗಿದೆ.

**ಗ್ರಾಮೀಣ ಯುವತಿಯರ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆ**

ಉನ್ನತ ಶಿಕ್ಷಣ ಪಡೆಯುತ್ತಿರುವ ಗ್ರಾಮೀಣ ಮಹಿಳಾ ವಿದ್ಯಾರ್ಥಿಗಳ ಸಾಮಾಜಿಕ–ಆರ್ಥಿಕ ಪರಿಸ್ಥಿತಿಯು ಕೆಳಹಂತದಲ್ಲಿರುವುದನ್ನು ನೋಡಬಹುದು. ಏಕೆಂದರೆ ಅಧ್ಯಯನ ಕ್ಷೇತ್ರ ದಾವಣಗೆರೆ ಜಿಲ್ಲೆಯು ಬಯಲುಸೀಮೆಯಿಂದ ಕೂಡಿರುವುದರಿಂದ ಇಲ್ಲಿ ನೀರಾವರಿ ಮೂಲಗಳು ಇಲ್ಲದಿರುವುದು ಇವರ ಕುಟುಂಬಗಳ ಆರ್ಥಿಕತೆಯ ಮೇಲೆ ಪರಿಣಾಮ ಬೀರುತ್ತಿದೆ. ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿನಿಯರ ಸಾಮಾಜಿಕ ಸ್ಥಾನಮಾನವು ಸ್ವಲ್ಪಮಟ್ಟಿಗೆ ಚೇತರಿಕೆಯನ್ನು ಕಂಡಿರುವುದು ವ್ಯಕ್ತವಾಗಿದೆ. ಆರ್ಥಿಕ ಸ್ಥಾನಮಾನವನ್ನು ನೋಡುವುದಾದರೆ ಇಂದಿಗೂ ಕೂಡ ಇವರು ಪುರುಷರ ಅಧೀನತೆಯಲ್ಲಿಯೇ ಉಳಿದುಕೊಂಡಿರುವುದು ಕಂಡುಬಂದಿದೆ. ಬಹುಪಾಲು ಮಾಹಿತಿದಾರರ ಕುಟುಂಬಗಳು ಬಡತನ ಹಾಗೂ ಮಧ್ಯಮ ವರ್ಗಗಳಿಂದ ಕೂಡಿರುವುದರಿಂದ ಈ ಕುಟುಂಬಗಳು ಗಳಿಸುವಂತಹ ಆದಾಯವು ಅವರ ಜೀವನ ನಿರ್ವಹಣೆಗೆ ಸಾಕಾಗುತ್ತಿಲ್ಲವಾದುದರಿಂದ ಅವರು ಆರ್ಥಿಕ ಸಮಸ್ಯೆಯನ್ನು ಹೆಚ್ಚಿನದಾಗಿ ಅನುಭವಿಸುತ್ತಿದ್ದಾರೆ. ಒಟ್ಟಾರೆಯಾಗಿ, ಮಹಿಳೆಯರು ಇಂದು ಉನ್ನತ ಶಿಕ್ಷಣವನ್ನು ಪಡೆಯುತ್ತಿದ್ದರೂ ಕೂಡ ಇವರು ಇಂದಿಗೂ ನಿರ್ಬಂಧಗಳಲ್ಲಿಯೇ ಜೀವನ ಸಾಗಿಸುತ್ತಿದ್ದು, ಕುಟುಂಬಗಳಲ್ಲಿ ಇವರ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲಾಗುತ್ತಿದೆ. ಮಾಹಿತಿದಾರರು ಮಧ್ಯಮ ಮತ್ತು ಕೆಳವರ್ಗದ ಕುಟುಂಬದಿಂದ ಬಂದವರಾದ್ದರಿಂದ, ಇವರಿಗೆ ಕೊಡುವ ಮಾಸಿಕ ಹಣದಿಂದಲೇ ತಮ್ಮ ವಿದ್ಯಾಭ್ಯಾಸದ ಖರ್ಚು–ವೆಚ್ಚಗಳನ್ನು ನಿರ್ವಹಣೆ ಮಾಡಿಕೊಳ್ಳುತ್ತಿರುವುದು ಕಂಡುಬರುತ್ತದೆ. ಒಟ್ಟಾರೆ

ಗ್ರಾಮೀಣ ಮಹಿಳಾ ವಿದ್ಯಾರ್ಥಿಗಳು ಸಾಮಾಜಿಕ–ಆರ್ಥಿಕ ಸ್ಥಾನಮಾನದಲ್ಲಿ ಹಿಂದುಳಿದಿರುವುದು ಅಧ್ಯಯನದಿಂದ ವ್ಯಕ್ತವಾಗಿದೆ

**ಸಂಶೋಧನೆಯಲ್ಲಿ ವ್ಯಕ್ತವಾದ ಅಂಶಗಳು**

ಉನ್ನತ ಶಿಕ್ಷಣದಲ್ಲಿ ಗ್ರಾಮೀಣ ವಿದ್ಯಾರ್ಥಿನಿಯರ ಸಮಸ್ಯೆಗಳನ್ನು ಕುರಿತು ಅಧ್ಯಯನವನ್ನು ಕೈಗೊಂಡ ಫಲವಾಗಿ ಸಂಶೋಧನೆಯಿಂದ ವ್ಯಕ್ತವಾದ ಕೆಲವು ಅಂಶಗಳನ್ನು ಈ ಕೆಳಕಂಡಂತೆ ಗಮನಿಸಬಹುದಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಕಂಡುಬಂದಂತೆ ಶೇಕಡ 63.34ರಷ್ಟು ಕುಟುಂಬಗಳಲ್ಲಿ ಹೆಣ್ಣು–ಗಂಡು ಭೇಧ–ಭಾವ ಇರುವುದನ್ನು ಕಾಣಬಹುದಾಗಿದೆ. ಹಾಗೆಯೇ, ಶೇಕಡ 68ರಷ್ಟು ವಿದ್ಯಾರ್ಥಿನಿಯರಿಗೆ ತಾವು ಹೆಣ್ಣೆಂಬ ಕೀಳರಿಮೆ ಭಾವನೆಯನ್ನು ಹೊಂದಿದ್ದಾರೆ. ಇದಕ್ಕೆ ಕಾರಣಗಳೆಂದರೆ ಮನೆಯಲ್ಲಿ ಗಂಡುಮಕ್ಕಳಿಗೆ ಸಿಗುವಷ್ಟು ಪ್ರೋತ್ಸಾಹ, ಸ್ವಾತಂತ್ರ್ಯ, ಪ್ರೀತಿ ವಾತ್ಸಲ್ಯ ಸಿಗದೆ ಇರುವುದಾಗಿದೆ. ಅಷ್ಟೇ ಅಲ್ಲದೆ ಹೆಣ್ಣು ಮಕ್ಕಳು ಎಂಬ ತಾತ್ಸಾರ ಮನೋಭಾವನೆ, ಗಂಡುಮಕ್ಕಳು ಸಂಸಾರದ ಕಣ್ಣು, ಅದರಲ್ಲೂ ಬಡತನದಿಂದ ಬಳಲುತ್ತಿರುವ ಪೋಷಕರಿಗೆ ಗಂಡುಮಕ್ಕಳೇ ಆಸ್ತಿ ಎಂಬ ಮನೋಭಾವ ಗ್ರಾಮೀಣ ಪ್ರದೇಶಗಳಲ್ಲಿ ಬೇರೂರಿವುದರಿಂದ. ಕುಟುಂಬಗಳಲ್ಲಿ ಗಂಡು–ಹೆಣ್ಣು ಎಂಬ ತಾರತಮ್ಯತೆ ಮಾಡುವ ಪೋಷಕರು ಹೆಚ್ಚು ಕಂಡುಬರುತ್ತಾರೆ.

ಅಧ್ಯಯನದಲ್ಲಿ ಮಾಹಿತಿದಾರರು ಶೈಕ್ಷಣಿಕ ಸಮಸ್ಯೆಗಳ ಕುರಿತಂತೆ ವಿವಿಧ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಬಹುಪಾಲು ಗ್ರಾಮೀಣ ವಿದ್ಯಾರ್ಥಿಗಳು ಬಸ್ಸಿನಲ್ಲಿ ಬರುವುದರಿಂದ ಕೆಲವು ವಿದ್ಯಾರ್ಥಿಗಳಿಗೆ ತುಂಬಾ ತೊಂದರೆ ಆಗುತ್ತಿರುವುದು ತಿಳಿದುಬಂದಿದೆ. ಕಾರಣ ಅಧ್ಯಯನ ಕ್ಷೇತ್ರದಲ್ಲಿನ ತಾಲೂಕುಗಳಲ್ಲಿ ಸಾರಿಗೆ ಸಂಪರ್ಕದ ಸಮಸ್ಯೆಯು ಹೆಚ್ಚಾಗಿದ್ದು, ಅವರಿಗೆ ಸೂಕ್ತ ಸಾರಿಗೆ ವ್ಯವಸ್ಥೆ ಇಲ್ಲದೆ ಆಟೋರಿಕ್ಷಾಗಳಲ್ಲಿ ಪಟ್ಟಣಕ್ಕೆ ಬಂದು, ತದನಂತರ ನಗರದ ವಾಹನಗಳಿಗೆ ತೆರಳಬೇಕಾಗಿದೆ. ಇದರಿಂದ ವಿದ್ಯಾರ್ಥಿಗಳು ಕಲಿಕೆಯಲ್ಲಿ ಹಿಂದೆ ಬೀಳುವ ಸಾಧ್ಯತೆ ಹೆಚ್ಚಿರುತ್ತದೆ. ಕೆಲವೊಂದು ವಿದ್ಯಾರ್ಥಿಗಳುಕಡುಬಡತನದ ಸ್ಥಿತಿಯಲ್ಲಿರುವುದರಿಂದ ಬಸ್ಸುಗಳ ಅನುಕೂಲತೆ ಇದ್ದರೂ ಹಣದ ಕೊರತೆಯಿಂದ 5–6 ಕಿ.ಮೀ ನಡೆದುಕೊಂಡು ಬರುತ್ತಾರೆ. ಕಾಲೇಜು ದೂರ ಇರುವ ಕಾರಣದಿಂದ ಕೆಲ ಪೋಷಕರು ಹೆಣ್ಣು ಮಕ್ಕಳನ್ನು ಕಾಲೇಜು ಬಿಡಿಸಿರುವುದು ಅಧ್ಯಯನದಲ್ಲಿ ತಿಳಿದುಬಂದಿದೆ.

ಸಾರಿಗೆ ಸಮಸ್ಯೆ ಒಂದೆಡೆಯಾದರೆ ತಮ್ಮ ವ್ಯಾಸಂಗಕ್ಕೆ ಅಗತ್ಯವಾಗಿ ಬೇಕಿರುವ ಕಲಿಕಾ ಸಾಮಗ್ರಿಗಳನ್ನು ಕೊಳ್ಳಲು ಸಂಕಷ್ಟಪಡುವುದನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ. ಶೇಕಡ 62.66ರಷ್ಟು ವಿದ್ಯಾರ್ಥಿಗಳು ಇದಕ್ಕೆ ಆರ್ಥಿಕ ಸಮಸ್ಯೆ ಮೂಲ ಕಾರಣ ಎಂದು ತಿಳಿಸಿದ್ದಾರೆ. ಪೋಷಕರ ಅಸಹಕಾರವು ವಿದ್ಯಾರ್ಥಿಗಳ ಕಲಿಕೆಗೆ ತೊಂದರೆಯಾಗಿದೆ.

ಉನ್ನತ ಶಿಕ್ಷಣ ಪಡೆಯುತ್ತಿರುವುದ್ದರಿಂದ ಶೇಕಡ 53.0 ರಷ್ಟು ವಿದ್ಯಾರ್ಥಿನಿಯರು ಆರ್ಥಿಕ ಹೊರೆಯಾಗಿದೆ ಎಂದೂ, ಶೇಕಡ 66.34 ಮಹಿಳೆಯರು ಕುಟುಂಬ ನಿರ್ವಹಣೆಯ ಸಮಸ್ಯೆಯಾಗಿದೆ ಎಂದು ತಿಳಿಸಿದ್ದಾರೆ. ಗ್ರಾಮೀಣ ಕುಟುಂಬಗಳು ಕೃಷಿ, ಕೂಲಿ, ಹೈನುಗಾರಿಕೆ ಚಟುವಟಿಕೆಗಳಿಂದ ಕುಟುಂಬವನ್ನು ನಿರ್ವಹಣೆ ಮಾಡುವುದರಿಂದ ಇದಕ್ಕೆ ಜನರ ಅವಶ್ಯಕತೆ ಇರುತ್ತದೆ. ಆದರೆ ಉನ್ನತ ಶಿಕ್ಷಣ ಪಡೆಯುವ ಯುವಜನಾಂಗ ಇಂತಹ ಕುಟುಂಬದ ಯಾವುದೇ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿಲ್ಲವಾದ ಕಾರಣ ಕುಟುಂಬಗಳು ಹಲವು ಆರ್ಥಿಕ ಸಂಬಂಧಿತ ಸಮಸ್ಯೆಗಳನ್ನು ಎದುರಿಸುತ್ತಿರುವುದು ಅಧ್ಯಯನದಲ್ಲಿ ಕಂಡುಬಂದಿದೆ.

ಮದ್ಯಂತರದಲ್ಲಿ ಕಾಲೇಜು ತೊರೆದಿರುವ ವಿದ್ಯಾರ್ಥಿನಿಯರಲ್ಲಿ ಶೇ.44 ರಷ್ಟು ಮಂದಿ ವಿವಾಹದಿಂದ, ಶೇ.48.66 ಸಾರಿಗೆ ಸಮಸ್ಯೆಯಿಂದ, ಶೇ.57 ವಿದ್ಯಾರ್ಥಿನಿಯರು ಬಡತನ ಕಾರಣ ಎಂದು

ಹೇಳಿದ್ದಾರೆ. ನಿಯಮಿತವಾಗಿ ಕಾಲೇಜಿಗೆ ಹಾಜರಾಗುವುದ ಬಗ್ಗೆ ಕೇಳಿದಾಗ ಶೇ.23.34 ರಷ್ಟು ವಿದ್ಯಾರ್ಥಿನಿಯರು ತರಗತಿಗಳಿಗೆ ಗೈರು ಹಾಜರಾಗುವುದಾಗಿ ತಿಳಿಸಿದ್ದಾರೆ. ಇದಕ್ಕೆ ಪ್ರಮುಖ ಕೌಟುಂಬಿಕ ವಾತಾವರಣ ಎಂದು ಹೇಳಿದ್ದಾರೆ. ಇದರೊಂದಿಗೆ ಸಾರಿಗೆ ಸಮಸ್ಯೆಯೂ ಕೂಡ ಗೈರುಹಾಜರಿಗೆ ಪ್ರಮುಖ ಕಾರಣವಾಗಿದೆ. ಅಧ್ಯಯನದಲ್ಲಿ ಶೇಕಡ 79ರಷ್ಟು ವಿದ್ಯಾರ್ಥಿನಿಯರು ಬಸ್‌ನಲ್ಲಿ ಪ್ರಯಾಣಿಸುವಾಗ ಸಮಸ್ಯೆಗಳನ್ನು ಎದುರಿಸುವುದಾಗಿ ಹೇಳಿದ್ದಾರೆ.

ಉನ್ನತ ಶಿಕ್ಷಣಕ್ಕೆ ಕುಟುಂಬದವರು ಸಹಕರಿಸುತ್ತಾರೆಯೇ ಎಂಬ ಪ್ರಶ್ನೆಗೆ ಬಹುತೇಕ ವಿದ್ಯಾರ್ಥಿನಿಯರು ಹೌದು ಎಂದು ತಿಳಿಸಿದ್ದಾರೆ. ಇಂದಿನ ಪೋಷಕರಿಗೆ ಶಿಕ್ಷಣದ ಮಹತ್ವದ ಬಗ್ಗೆ ಅರಿವಿರುವುದ್ದರಿಂದ ಹೆಣ್ಣು ಮಕ್ಕಳನ್ನು ಕೂಡ ಕಾಲೇಜಿಗೆ ಕಳಹಿಸಲು ಬಯಸುತ್ತಾರೆ. ಆದರೆ ಮನೆಯಲ್ಲಿನ ಹಿರಿಯ ವಯಸ್ಸಿನ ಮಹಿಳೆಯರು ಅತ್ಯಲ್ಪ ಪ್ರಮಾಣದಲ್ಲಿ ವಿರೋಧ ವ್ಯಕ್ತಪಡಿಸುವುದನ್ನು ಕಾಣಬಹುದಾಗಿದೆ. ಇನ್ನೂ ಕೆಲವು ವಿದ್ಯಾರ್ಥಿನಿಯರು ಮನೆಯಲ್ಲಿ ಕಾಲೇಜಿಗೆ ಕಳುಹಿಸಲು ಸಹಕಾರವಿಲ್ಲ ಆದರೂ ನಮ್ಮ ಸ್ವ–ಇಚ್ಛೆಯಿಂದ ಕಾಲೇಜು ಶಿಕ್ಷಣ ಪಡೆಯುತ್ತಿರುವುದಾಗಿ ತಿಳಿಸಿದ್ದಾರೆ. ಸಹಕಾರ ನೀಡದ ಪೋಷಕರನ್ನು ಸಂದರ್ಶಿಸಿದಾಗ ಶೇ.35 ರಷ್ಟು ಪೋಷಕರು ಓದಿರುವ ಗಂಡು ಮಕ್ಕಳೆ ಉದ್ಯೋಗವಿಲ್ಲದೆ ಕೂಲಿಗೆ ಹೋಗುತ್ತಿದ್ದಾರೆ. ಇನ್ನೂ ಹೆಣ್ಣು ಮಕ್ಕಳನ್ನು ಓದಿಸಿ ಏನು ಪ್ರಯೋಜನವಿಲ್ಲ ಎಂಬ ಮನೋಭಾವನೆಯನ್ನು ಹೊಂದಿದ್ದಾರೆ.

ಒಟ್ಟಾರೆ ಅಧ್ಯಯನದಲ್ಲಿ ಕಂಡುಬಂದಂತೆ ಗ್ರಾಮೀಣ ಪ್ರದೇಶಗಳಲ್ಲಿ ಪುರುಷರಿಗೆ ಶಿಕ್ಷಣ ಪಡೆಯಲು ನೀಡಿರುವಷ್ಟು ಪ್ರೋತ್ಸಾಹವನ್ನು ಸ್ತ್ರೀ ಶಿಕ್ಷಣಕ್ಕೆ ನೀಡದಿರುವುದು ಕಂಡುಬರುತ್ತದೆ. ಹಾಗೆಯೇ ಬಹಳಷ್ಟು ಪೋಷಕರು ಹೆಣ್ಣು ಮನೆಯೊಳಗಿರಬೇಕು ಎಂಬ ಪೂರ್ವಗ್ರಹ ಪೀಡಿತ ಭಾವನೆ ಹೊಂದಿರುವುದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಸ್ತ್ರೀ ಶಿಕ್ಷಣ ಪ್ರಗತಿ ಸಾಧಿಸುತ್ತಿಲ್ಲ ಎಂಬುದು ಪ್ರಸ್ತುತ ಸಂಶೋಧನೆಯಲ್ಲಿ ವ್ಯಕ್ತವಾಗಿದೆ.

**ಸಲಹೆಗಳು**

- ಸಮಾಜದಲ್ಲಿ ಮಹಿಳೆಯರನ್ನು ನೋಡುವ ದೃಷ್ಟಿಕೋನ ಬದಲಾಗಬೇಕು ಮತ್ತು ಅವರನ್ನು ಎಲ್ಲರಂತೆ ಸಮಾನವಾಗಿ ಕಾಣಬೇಕು.
- ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಶಿಕ್ಷಣದ ಮಹತ್ವದ ಬಗ್ಗೆ ಬಹುತೇಕ ಜನರಿಗೆ ಅರಿವಿಲ್ಲ. ಆದುದರಿಂದ ಅವರಿಗೆ ಉನ್ನತ ಶಿಕ್ಷಣದ ಮಹತ್ವದ ಕುರಿತು ಅರಿವುಮೂಡಿಸಬೇಕು.
- ವಿದ್ಯಾರ್ಥಿನಿಯರು ಬಾಲ್ಯದಿಂದಲೇ ತಾರತಮ್ಯಕ್ಕೊಳಗಾಗುತ್ತಾರೆ. ಇದರಿಂದ ಅವರು ಮಾನಸಿಕವಾಗಿ ಕುಗ್ಗಿಹೋಗುತ್ತಾರೆ. ಪ್ರತಿ ಕಾಲೇಜುಗಳಲ್ಲಿ ಇವರ ಸಮಸ್ಯೆಗಳಿಗೆ ಸ್ಪಂದಿಸುವ ರೀತಿಯಲ್ಲಿ ಆಪ್ತ ಸಮಾಲೋಚಕರನ್ನು ನೇಮಿಸುವ ಅವಶ್ಯಕತೆಯಿದೆ ಇದೆ.
- ಮಹಿಳೆಯರ ಹಕ್ಕು ಹಾಗೂ ಗೌರವಯುತ ಜೀವನಕ್ಕಾಗಿ ಸಾಕಷ್ಟು ಅನುದಾನವನ್ನು ಮೀಸಲಿಡಬೇಕು. ಇದಕ್ಕಾಗಿ ರಾಜ್ಯ ಹಾಗೂ ಕೇಂದ್ರದಲ್ಲಿ ಪ್ರತ್ಯೇಕ ಬಜೆಟ್ ಮಂಡಿಸಬೇಕು.
- ಉನ್ನತ ಶಿಕ್ಷಣ ಪಡೆಯುತ್ತಿರುವ ಗ್ರಾಮೀಣ ವಿದ್ಯಾರ್ಥಿನಿಯರಿಗೆ ಸರ್ಕಾರವು ಜಿಲ್ಲಾ ಕೇಂದ್ರಗಳಲ್ಲಿ ಪ್ರತ್ಯೇಕವಾದ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಬೇಕು.
- ಗ್ರಾಮೀಣ ವಿದ್ಯಾರ್ಥಿಗಳಿಗೆ ವಿಶೇಷವಾದ ಯೋಜನೆಗಳು, ಸಹಾಯ ಧನಗಳು ಮತ್ತು ಸಾಲ ಸೌಲಭ್ಯಗಳನ್ನು ಮಂಜೂರು ಮಾಡಬೇಕು. ಈ ರೀತಿ ಮಾಡಿದಾಗ ಉನ್ನತ ಶಿಕ್ಷಣದತ್ತ ಗ್ರಾಮೀಣ ಪ್ರದೇಶದ ಯುವಜನತೆಯ ದಾಖಲಾತಿ ಪ್ರಮಾಣ ಅಧಿಕವಾಗುತ್ತದೆ.

**ಉಪಸಂಹಾರ**

ಒಟ್ಟಾರೆಯಾಗಿ, ಪ್ರಸ್ತುತ ಸಂಶೋಧನಾ ಅಧ್ಯಯನಕ್ಕೆ ವಿಷಯವನ್ನು ಕೇಂದ್ರೀಕರಿಸಿ ಹೇಳುವುದಾದರೆ, ಮಹಿಳೆಯರು ಇಂದಿಗೂ ಕೆಲವು ನಿಬಂಧನೆಗಳಿಂದ ಮುಕ್ತಿಯನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಅಂತಹ ನಿಬಂಧನೆಗಳು ಇನ್ನಿತರೆ ವಿಷಯಗಳ ಮೇಲೆ ನಕಾರಾತ್ಮಕವಾದ ಪರಿಣಾಮಗಳನ್ನು ಬೀರುತ್ತವೆ. ಗ್ರಾಮೀಣ ಮಹಿಳಾ ವಿದ್ಯಾರ್ಥಿನಿಯರ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಇಂತಹ ಕೆಲವು ಅಂಶಗಳು ಬೆಳಕಿಗೆ ಬಂದಿವೆ. ಉನ್ನತ ಶಿಕ್ಷಣ ಮಾಡುವಂತಹ ಮಹಿಳೆಯರಿಗೆ ಕೌಟುಂಬಿಕ ಮತ್ತು ಸಾಮಾಜಿಕ ಪರಿಸರವು ಅವರಿಗೆ ಬೆಂಬಲ ನೀಡಿ ಸಹಕರಿಸದಿದ್ದರೆ ಅವರು ಶೈಕ್ಷಣಿಕ ಸಾಧನೆಯನ್ನು ಮಾಡುವಲ್ಲಿ ವಿಫಲರಾಗುತ್ತಾರೆ. ಆದುದರಿಂದ ಉನ್ನತ ಶಿಕ್ಷಣದಲ್ಲಿ ಮಹಿಳೆಯರು ಯಶಸ್ವಿಯಾಗಬೇಕಾದರೆ ಸ್ವ–ಆಸಕ್ತಿ ಮತ್ತು ಬದ್ಧತೆಯ ಜೊತೆಗೆ ಕೌಟುಂಬಿಕ ಹಾಗೂ ಕಾಲೇಜು ವಾತಾವರಣವು ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತವೆ. ಇಂತಹ ಮಹಿಳಾ ವಿದ್ಯಾರ್ಥಿಗಳಿಗೆ ಕುಟುಂಬವು ಬೆಂಬಲವಾಗಿ ನಿಲ್ಲಬೇಕಾದ ಅಗತ್ಯತೆ ಇದೆ. ಅವರ ಸಮಸ್ಯೆಗಳನ್ನು ಅರಿತುಕೊಂಡು ಕುಟುಂಬ ಮತ್ತು ಕಾಲೇಜುಗಳ ಬೋಧಕ ವರ್ಗವು ಅವರ ಬಗ್ಗೆ ವಿಶೇಷ ಕಾಳಜಿ ತೋರಿ, ಸಹಕಾರ ಮತ್ತು ಪ್ರೋತ್ಸಾಹ ನೀಡಿದರೆ, ಶೈಕ್ಷಣಿಕವಾಗಿ ಯಶಸ್ವಿಯಾಗಲು ಸಾಧ್ಯವಾಗುತ್ತದೆ ಎಂಬುದು ಪ್ರಸ್ತುತ ಅಧ್ಯಯನದ ಸಾರಾಂಶವಾಗಿದೆ.

**ಪರಾಮರ್ಶನ ಗ್ರಂಥಗಳು**


- ಅಕ್ಕಿಮಂಗಲ ಸುರೇಶ. (2010). ಶೈಕ್ಷಣಿಕ ಅಸಮತೋಲನ. *ಯೋಜನಾ.* ಡಿಸೆಂಬರ್ ಸಂಚಿಕೆ.
- ಚಂದ್ರಶೇಖರ ಟಿ.ಆರ್. (2010). *ಕರ್ನಾಟಕದಲ್ಲಿ ಸಾಕ್ಷರತೆಯ ಲಿಂಗ ಸಂಬಂಧಿ ಸ್ವರೂಪ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಇಂದಿರಾ ಆರ್. (2002). *ಮಹಿಳೆ, ಸಮಾಜ* ಮತ್ತು *ಸಂಸ್ಕೃತಿ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಗುರುಲಿಂಗಯ್ಯ, ಎಂ. (2016). *ಅಂಚಿನ ಗುಂಪುಗಳ ಸಮಾಜಶಾಸ್ತ್ರ.* ದೀವಿತ ಪ್ರಕಾಶನ.
- ಗೋವಿಂದ ರಾಜು. (2017). ಭಾರತದ ಉನ್ನತ ಶಿಕ್ಷಣದ ಪ್ರಗತಿ : ಒಂದು ಅವಲೋಕನ. *ಸಮಾಜಕಾರ್ಯದ ಹೆಜ್ಜೆಗಳು.*
- ಜಯರಾಂ ಎನ್. (2010). ಅಭಿವೃದ್ಧಿ ಹಾದಿಯಲ್ಲಿರುವ ದೇಶಗಳಿಗೊಂದು ಸಮರ್ಥ ಉನ್ನತ ಶಿಕ್ಷಣ ನೀತಿ. *ಹೊಸತು ಮಾಸಿಕ.* ಜುಲೈ ತಿಂಗಳ ಸಂಚಿಕೆ.
- ಕೊಂಗವಾಡ ಎನ್.ಬಿ. (1995). *ಭಾರತದಲ್ಲಿ ಶಿಕ್ಷಣ ಹಾಗೂ ಪ್ರಚಲಿತ ಸಮಸ್ಯೆಗಳು.* ವಿದ್ಯಾನಿಧಿ ಪ್ರಕಾಶನ.
- ಓಂಕಾರ ಕಾಕಡೆ. (2010). ಲಿಂಗಾಧಾರಿತ ಬಜೆಟ್ ಮತ್ತು ಮಹಿಳಾ ಸಬಲೀಕರಣ. *ಯೋಜನಾ ಮಾರ್ಚ್ ಸಂಚಿಕೆ.*
- ರೇಣುಕಾರ್ಯ ಸಿ.ಕೆ. (2006). *ಮಹಿಳೆ ಮತ್ತು ಅಭಿವೃದ್ಧಿ.* ಶ್ರೀ ರಾಜೇಂದ್ರ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್.
- ಶಕುಂತಲಾ ಸಿ. ಶೆಟ್ಟರ. (2010). ಮಹಿಳೆ ಮತ್ತು ಶಿಕ್ಷಣ. *ಯೋಜನಾ ಮಾರ್ಚ್ ಸಂಚಿಕೆ.*
- ಉಷಾದೇವಿ.ಎಂ.ಡಿ. (2000). ಶಿಕ್ಷಣ ಕ್ಷೇತ್ರದ ಅಭಿವೃದ್ಧಿ ಯೋಜನೆಗಳು ಮತ್ತು ಮಹಿಳೆ. *ಮಹಿಳಾ ಅಧ್ಯಯನ,* 2(3).
- Devi, S. (2001). *Inequalities of Access of Elementary Education in Orissa*. Sage Publications.
- Heidi, S. L., & Denies, S. A. (2018). *Challenges and Opportunities for*

*Women in Higher Education Leadership*. IGI Global Publisher.

- Mishra, R. C. (2005). *Women Education*. APH Publishing House.
- Nair, R. G. (1983). Education: Why do Girls Drop-out More? *Kurukshetra, 31*(14), May.
- Sen, R. (2008). *Women and Higher Education*. Cresent Publishing House, New Delhi.
- Singh, N. S. (2008). *Higher Education for Women in India: Choices and Challenges*. Form on Public Policy, 01, Spring.